ಓ.ಎಸ್.ನಂ.388/2016

ದಿನಾಂಕಃ15-04-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯುಃ1

**ಪಾಟೀ ಸವಾಲುಃ ಶ್ರೀ ಕೆ.ಪಿ.ಎನ್ ಪ್ರತಿವಾದಿಗಳ ಪರ ವಕೀಲರಿಂದಃ-**

ದಾವಾ ಆಸ್ತಿ ಅನ್ಯಕ್ರಾಂತಕ್ಕಿಂತ ಮುಂಚೆ ಸರ್ವೆ ನಂಬರ್ 198/3 ರ ಜಮೀನು ಆಗಿರುತ್ತದೆ. ದಾವಾ ಆಸ್ತಿಯನ್ನು ಎಲ್.ಸಿ ರವೀಂದ್ರ ಕುಮಾರ್ ರವರಿಂದ 1 ಕೋಟಿ 25 ಲಕ್ಷ ರೂ.ಗಳಿಗೆ ಖರೀದಿಸಿರುತ್ತೇವೆ. ದಾವಾ ಸ್ವತ್ತಿನಲ್ಲಿ ದಾವಾ ಸ್ವತ್ತಿಗೆ ಪೂರ್ಣ ಕ್ರಯದ ಮೊಬಲಗನ್ನು ಪಾವತಿ ಮಾಡದ ಕಾರಣ ನಾನು ಮಾಲಿಕನಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅದರ ಮೂಲ ಮಾಲೀಕರು ನನಗೆ ಸ್ವಾಧೀನ ಬಿಟ್ಟು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಎಲ್.ಸಿ ರವೀಂದ್ರಕುಮಾರ್ ರವರು ಸಂಬಂಧಿಕರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಎಲ್.ಸಿ ರವೀಂದ್ರಕುಮಾರ್ ದಾವಾ ಆಸ್ತಿಯನ್ನು ಜಿ.ಡಿ ಚಾವ್ಡಾ ರವರಿಂದ 1964 ರಲ್ಲಿ ಖರೀದಿಸಿರುತ್ತಾರೆ. ಚಾವ್ಡಾ ರವರಿಂದ ಎಲ್.ಸಿ ರವೀಂದ್ರಕುಮಾರ್ ಖರೀದಿಸಿದ ಕ್ರಯಪತ್ರವನ್ನು ನೋಡಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ಈಗ ನಾನು ಸ್ವಾಧೀನದಲ್ಲಿರುವ ಚಕ್ಕುಬಂಧಿಯನ್ನೇ ತೋರಿಸಿರುತ್ತಾರೆ. ಚಾವ್ಡಾ ರವರಿಂದ ಎಲ್.ಸಿ ರವೀಂದ್ರಕುಮಾರ್ ರವರಿಗೆ ಆದ ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಕೆ.ಎಂ ರಸ್ತೆ ಎಂದು ನಮೂದು ಇದೆ ಎಂದರೆ ಸರಿ. ಎಲ್.ಸಿ ರವೀಂದ್ರಕುಮಾರ್ರವರಿಂದ ನಾನು ಖರೀದಿಸಿರುವ ಕ್ರಯಪತ್ರದಲ್ಲಿ ಸ್ವತ್ತಿನ ಚಕ್ಕುಬಂದಿ ಉತ್ತರಕ್ಕೆ ಕೆ.ಎಂ ರಸ್ತೆ ಇದೆ ಎಂದರೆ ಸರಿ, ಸಾಕ್ಷಿ ಯು ಮುಂದುವರೆದು ಈ ವಿಚಾರವಾಗಿ ಚಾವ್ಡಾ ರವರಿಂದ ಎಲ್.ಸಿ ರವೀಂದ್ರಕುಮಾರ್ ರವರಿಂದ ತಿದ್ದುಪಡಿ ಕ್ರಯಪತ್ರವನ್ನು 2015 ರಲ್ಲಿ ಬರೆಸಿಕೊಂಡಿರುತ್ತಾರೆ ನಂತರ ನಾನು ಖರೀದಿ ಮಾಡಿರುತ್ತೇನೆ.

ತಿದ್ದುಪಡಿ ಕ್ರಯಪತ್ರವನ್ನು ಚಕ್ಕುಬಂದಿ ಉತ್ತರಕ್ಕೆ ಕೆ.ಎಂ ರಸ್ತೆ ನಮೂದಿಸದ ವ್ಯತ್ಯಾಸದ ಬಗ್ಗೆ ಬರೆದುಕೊಡಲಾಗಿರುತ್ತದೆ. ಚಾವ್ಡಾರವರು ಬರೆದುಕೊಟ್ಟಿರು ಕ್ರಯಪತ್ರದಲ್ಲಿ ಪಶ್ಚಿಮ ದಿಕ್ಕಿಗೆ (ಕೆ.ಎಂ ರಸ್ತೆ) 198 ಅಡಿ ವಿಸ್ತೀರ್ಣ ಇದೆ ಎಂದು ನಮೂದಿಸಿದೆ ಎಂದರೆ ನನಗೆ ಗೊತ್ತಿಲ್ಲ. ಎಲ್.ಸಿ ರವೀಂದ್ರಕುಮಾರ್ ರವರು ನನಗೆ ಬರೆದುಕೊಟ್ಟಿರು ಕ್ರಯಪತ್ರದಲ್ಲಿ ಕೆ.ಎಂ ರಸ್ತೆ ಕಡೆಗೆ 280 ಅಡಿ ವಿಸ್ತೀರ್ಣ ಇರುವುದಾಗಿ ಬರೆಯಲಾಗಿರುತ್ತದೆ. ಕೆ.ಎಂ ರಸ್ತೆಯು ವಾಯುವ್ಯ ದಿಕ್ಕಿನಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರದ ಕಡೆಗೆ ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಇದೆ ಎಂದರೆ ಸರಿಯಲ್ಲ. ಕೆ.ಎಂ ರಸ್ತೆ ಕಡೆಗೆ 198 ಅಡಿ ಗಳ ಬದಲಾಗಿ 280 ಅಡಿ ಗಳು ಎಂದು ಕ್ರಯಪತ್ರದಲ್ಲಿ ನಮೂದು ಮಾಡಿಕೊಂಡು ಕೆ.ಎಂ ರಸ್ತೆ ಕಡೆಗಿರುವ ಪ್ರತಿವಾದಿಗಳ ಸ್ವತ್ತುನ್ನು ಒತ್ತುವರಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಸದರಿ ವಿಚಾರವಾಗಿ ಪ್ರತಿವಾದಿಗಳು ನನ್ನ ಮೇಲೆ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 376/13 ನ್ನು

ದಾಖಲಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಚಕ್ಕುಬಂದಿಯಲ್ಲಿ ಕಾಣಿಸಿರುವಂತೆ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿ ನೀಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
**3 ನೇ.ಹೆ.ಪ್ರ:ದ:ನ್ಯಾ:ದಂ.,ರವರು, ಕಡೂರು.**